**ಸಿಸಿ ನಂಃ 1929/2025**

**ಪಿ. ಡಬ್ಲ್ಯು. 1**

**(ಇಂದು ದಿನಾಂಕಃ 03-03-2026 ರಂದು ಪಿ.ಡಬ್ಲ್ಯು.1 ರವರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)**

**ಪಾಟೀ ಸವಾಲುಃ- ಆರೋಪಿ ಪರ ವಕೀಲರಾದ ಶ್ರೀ ಪಿ ಜಿ ಪಿ ರವರಿಂದಃ**

ಆರೋಪಿ ನಿಮಗೆ ಹೇಗೆ ಪರಿಚಯ ಎಂದರೆ ಸಾಕ್ಷಿ ಆರೋಪಿಯ ಗಂಡ ಹಾಗೂ ಆರೋಪಿಯ ಮಾವ ಪರಿಚಯಸ್ಥರಾಗಿದ್ದರಿಂದ ಅವರು ನನಗೆ ಪರಿಚಯ ಅಂತಾ ಉತ್ತರಿಸುತ್ತಾರೆ.

2. ಆರೋಪಿ ಯಾವ ದಿನಾಂಕದಂದು ನಿಮ್ಮ ಬಳಿ ಹಣ ಕೇಳಿ ಬಂದಿದ್ದರು ಎಂದರೆ ಸಾಕ್ಷಿ ದಿನಾಂಕ 01-09-2024 ರಂದು ಬಂದಿದ್ದರು ಅಂತಾ ಉತ್ತರಿಸುತ್ತಾರೆ. ಆರೋಪಿಗೆ ನೀವು ಯಾವ ದಿನಾಂಕದಂದು ಹಣ ಕೊಟ್ಟಿದ್ದೀರಿ ಎಂದರೆ ಸಾಕ್ಷಿ ದಿನಾಂಕ 01-09-2024 ರಂದೇ ಹಣ ಕೊಟ್ಟಿದ್ದೆ ಅಂತಾ ಉತ್ತರಿಸುತ್ತಾರೆ. ನೀವು ಆರೋಪಿಗೆ ದಿನಾಂಕ 01-09-2024 ರಂದು ಹಣ ಕೊಟ್ಟ ಬಗ್ಗೆ ಫಿರ್ಯಾದಿಯಲ್ಲಿ ನಮೂದಿಸಿಲ್ಲ ಎಂದರೆ ಸರಿ. ನೀವು ಆರೋಪಿಗೆ ಹಣ ಕೊಡುವಾಗ ಅವರು ಇಂತಿಷ್ಟೇ ದಿನದಲ್ಲಿ ವಾಪಾಸು ಕೊಡುತ್ತೇನೆ ಅಂತಾ ಮಾತುಕತೆ ಆಗಿತ್ತಾ ಎಂದರೆ ಸಾಕ್ಷಿ ಒಂದು ತಿಂಗಳ ಒಳಗಾಗಿ ವಾಪಾಸು ಕೊಡುತ್ತೇನೆ ಅಂತಾ ಮಾತುಕತೆ ಆಗಿತ್ತು ಅಂತಾ ಉತ್ತರಿಸುತ್ತಾರೆ. ಆರೋಪಿ ನಿಮಗೆ ಒಂದು ತಿಂಗಳ ಒಳಗಾಗಿ ಹಣ ವಾಪಾಸು ಕೊಟ್ಟಿದ್ದಾರಾ ಎಂದರೆ ಸಾಕ್ಷಿ ವಾಪಾಸು ಕೊಟ್ಟಿಲ್ಲ ಅಂತಾ ಉತ್ತರಿಸುತ್ತಾರೆ. ಒಂದು ತಿಂಗಳ ನಂತರ ನೀವು ಹಣ ಕೊಡುವಂತೆ ಆರೋಪಿಯನ್ನು ಕೇಳಿದ್ದೀರಾ ಎಂದರೆ ಸಾಕ್ಷಿ ಕೇಳಿದ್ದೆ ದಿನಾಂಕ 21-09-2024 ರಂದು ಅಕ್ಟೋಬರ್ ತಿಂಗಳಿನಲ್ಲಿ ಬ್ಯಾಂಕಿಗೆ ನಗದೀಕರಣಕ್ಕೆ ಹಾಜರುಪಡಿಸಿ ಅಂತಾ ಚೆಕ್ಕು ಕೊಟ್ಟಿರುತ್ತಾರೆ ಅಂತಾ ಉತ್ತರಿಸುತ್ತಾರೆ. ಆ ರೀತಿ ಫಿರ್ಯಾದಿಯಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಆ ರೀತಿ ನಮೂದು ಮಾಡಲು ನಿಮಗೆ ತೊಂದರೆ ಇತ್ತಾ ಎಂದರೆ ಸಾಕ್ಷಿ ಇಲ್ಲಾ ಅಂತಾ ಉತ್ತರಿಸುತ್ತಾರೆ.

3. ಆರೋಪಿ ನಿಮ್ಮ ಬಳಿ ಯಾವುದೇ ಸಾಲವನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ.

4. ನೀವು ಶಿವಂ ಕೋ-ಅಪರೇಟಿವ್ ಸೊಸೈಟಿಯಲ್ಲಿ ಮ್ಯಾನೇಜರ್ ಎಂದರೆ ಸಾಕ್ಷಿ ನಾನು ಸದ್ರಿ ಸಂಘದ ಸದಸ್ಯ ಅಂತಾ ಉತ್ತರಿಸುತ್ತಾರೆ.

**ಸಿಸಿ ನಂಃ 1929/2025**

**ಪಿ. ಡಬ್ಲ್ಯು 1**

5. ನೀವು ಆರೋಪಿಯ ಗಂಡನ ವಿರುದ್ಧ ಸಲ್ಲಿಸಿದ್ದ ಪ್ರಕರಣದಲ್ಲಿ ನೀವು ಶಿವಂ ಕೋ-ಅಪರೇಟಿವ್ ಸೊಸೈಟಿಯ ಮ್ಯಾನೇಜರ್ ಡೈರಕ್ಟರ್ ಅಂತಾ ಹೇಳಿರುತ್ತೀರಿ ಎಂದರೆ ಸುಳ್ಳು. ಶಿವಂ ಕೋ-ಅಪರೇಟಿವ್ ಸೊಸೈಟಿ ನೀವು ನಡೆಸುತ್ತಿರುವ ಸಂಘ ಎಂದರೆ ಸರಿಯಲ್ಲ.

6. ಶಿವಂ ಕೋ-ಅಪರೇಟಿವ್ ಸೊಸೈಟಿಯಲ್ಲಿ ಆರೋಪಿಯು ಸಾಲ ಪಡೆದುಕೊಂಡಿದ್ದಾರೆ ಎಂರದೆ ಸುಳ್ಳು. ಆ ಸಾಲವನ್ನು ಮರೆಮಾಚಿ ಆರೋಪಿ ಸದ್ರಿ ಸಂಘಕ್ಕೆ ಕೊಟ್ಟ ಚೆಕ್ಕನ್ನು ನೀವು ದುರುಪಯೋಗಪಡಿಸಿಕೊಂಡು ಆರೋಪಿಯ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

7. ಸಧ್ಯದಲ್ಲಿ ನೀವು ಮಾನ್ಯ ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ 5-6 ಪ್ರಕರಣಗಳನ್ನು ದಾಖಲಿಸಿರುತ್ತೇನೆ ಎಂದರೆ ಸರಿ. ಅದಕ್ಕೂ ಪೂರ್ವದಲ್ಲಿ 5-6 ಪ್ರಕರಣಗಳನ್ನು ದಾಖಲಿಸಿರುತ್ತೇನೆ ಎಂರದೆ ಸುಳ್ಳು.

8. ನಾನು ಲೇವಾದೇವಿ ವ್ಯವಹಾರ ಮಾಡುತ್ತೇನೆ ಎಂದರೆ ಸುಳ್ಳು. ನಾನು ಯಾವುದೇ ಪರವಾನಿಗೆ ಇಲ್ಲದೇ ಲೇವಾದೇವಿ ವ್ಯವಹಾರ ಮಾಡುತ್ತೇನೆ ಎಂದರೆ ಸುಳ್ಳು. ಮನಸ್ಸಿಗೆ ಬಂದಂತೆ ಬಡ್ಡಿಯನ್ನು ತೆಗೆದುಕೊಳ್ಳುತ್ತೇನೆ ಎಂದರೆ ಸರಿಯಲ್ಲ.

9. ಆರೋಪಿ ಭದ್ರತೆಯ ಸಲುವಾಗಿ ಕೊಟ್ಟ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡು ಈ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ**

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು.**
**ಕಾರವಾರ.**